SRI AZIZ SAIT.—The answer lies in the question itself. We have also tried with the Government of India and somehow I feel the Government of India are not very kind towards us.

ಶ್ರೀ ಕೆ.ಹೆಚ್. ಪುಟ್ಟಸ್ವಾಮಿಗೌಡ.—ಕೇಂದ್ರ ಸರ್ಕಾರದವರು ದಾನಕ್ಕೆ ಏನಾದರೂ ಕೊಡುತ್ತಿದ್ದಾರೆಯೆ ? ಬೇರೆ ಕಡೆ ಕೊಟ್ಟು ಕರ್ನಾಟಕಕ್ಕೆ ಕೊಡುತ್ತಿಲ್ಲ. ಅವರಿಗೆ ಅಷ್ಟು ದಯೆ ಇಲ್ಲವೆಂದರೆ ನಾವೇನು ಬಿಕ್ಷೆ ಕೇಳುತ್ತಿದ್ದೇವೆಯೇ ? ಇಲ್ಲಿನ ಜನರು ಏನು ಮಾಡಬೇಕು ? ಕೇಂದ್ರ ಸರ್ಕಾರದವರು ಎಲ್ಲರಿಗೂ ಒಂದೇ ನೀತಿಯನ್ನು ಅನುಸರಿಸಬೇಕು. ಕೇರಳ ಮತ್ತು ತಮಿಳ್ನಾಡಿಗೆ ಕೊಟ್ಟು ಇಲ್ಲಿಗೆ ಕೊಡಲಿಲ್ಲವೆಂದರೆ ನಾವೇನು ಬಿಕ್ಷೆ ಕೇಳುತ್ತಿದ್ದೇವೆಯೆ ? ನೀವು ಒತ್ತಾಯ ಮಾಡಬೇಕು. ಯಾವುದೇ ಹೋರಾಟಕ್ಕೆ ಸದನ ಮತ್ತು ಜನ ತಯಾರಿದ್ದಾರೆ.

ಶ್ರೀ ಅಜೀಜ್ ಸೇಟ್.—ದಯೆ ತೋರಿಸುವ ಪ್ರಶ್ನೆ ಇಲ್ಲ. ರಾಜಕೀಯ ಒಳಗಡೆ ಬಂದಿದೆ ಎಂದು ಕಾಣುತ್ತದೆ.

ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ರೈತರ ತೊಂದರೆ ಚುಕ್ಕೆ ಗುರುತಿನ ಪ್ರಶ್ನೆ ೨೬೩. (೫೧೭)

ಶ್ರೀ ಕೆ.ಎಂ. ಪುಟ್ಟು (ಕಿರುಗಾವಲು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಆರ್.ಎಸ್.ನ ಮೂಲ ಅಚ್ಚುಕಟ್ಟು ಪ್ರದೇಶದ ರೈತರುಗಳು ನೀರಿಲ್ಲದೆ ಭವಣೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ವಿಶ್ವೇಶ್ವರಯ್ಯ ನಾಲೆಯ ಕಾವೇರಿ ಶಾಖೆಯಲ್ಲಿ ಎಷ್ಟು ಪಂಪುಸೆಟ್ಟುಗಳಿವೆ ?

ಇ) ಈ ಪಂಪುಸೆಟ್ಟುಗಳು ಭೂಗರ್ಭ ನೀರಿನಿಂದ ನಡೆಯುತ್ತಿವೆಯೆ ಅಥವಾ ಸೈಫನ್ ಅಳವಡಿಸಿಕೊಂಡು ನಡೆಯುತ್ತಿವೆಯೆ ?

ಈ) ಇದರಿಂದ ಮೂಲ ರೈತರಿಗೆ ತೊಂದರೆಯಾಗಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ೧೯೯ ಪಂಪುಸೆಟ್ಟುಗಳಿವೆ.

ಇ) ಹಲವು ನಾಲೆಯಿಂದ ನೇರವಾಗಿ ಹಲವು ಪ್ರಕರಣಗಳಲ್ಲಿ ನಾಲೆಗೆ ಪೈಪ್ ಅಳವಡಿಸಿ ಸೈಫನ್ ಮೂಲಕ ಹಾಗೂ ಹಲವೆಡೆ ನಾಲೆಯ ಸಮೀಪದಲ್ಲಿರುವ ಬಾವಿಯ ಮೂಲಕ ಪಂಪುಸೆಟ್ ಅಳವಡಿಸಿ ನೀರನ್ನು ಸೆಳೆಯುತ್ತಿವೆ.

ಈ) ನಿಜ.

ಉ) ಅನಧಿಕೃತ ಪಂಪುಸೆಟ್ಟುಗಳನ್ನು ತೆಗೆದುಹಾಕುವ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ. ಎಂ. ಪುಟ್ಟು.—ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಕಾವೇರಿ ಮತ್ತು ಅದರ ಮುಂದೆ ಹರಿಯುವ ತಿರಪಮೂರು ನಿಡಘಟ್ಟ ಮತ್ತು ಮದ್ದೂರು ಈ ಬ್ರಾಂಚ್‌ಗಳಲ್ಲಿ ೧೨೦೦ ಕ್ಕೂ ಮೇಲ್ಪಟ್ಟು ಪಂಪುಸೆಟ್ಟುಗಳಿವೆ. ಆದರೆ ಉತ್ತರದಲ್ಲಿ ೧೯೯ ಎಂದು ಕೊಟ್ಟಿದ್ದಾರೆ. ಕಾವೇರಿಯ ಬ್ರಾಂಚ್‌ನಲ್ಲಿ ಸಹ ೩೦೦-೪೦೦ ಪಂಪ್‌ಸೆಟ್ಟುಗಳು ೫ ಹೆಚ್.ಪಿ.ಯಿಂದ ೨೫ ಹೆಚ್. ಪಿ. ಶಕ್ತಿಯಿರುವ ಪಂಪುಸೆಟ್ಟುಗಳಿವೆ. ರೈತರಿಗೂ ಸರ್ಕಾರಕ್ಕೂ ತಕರಾರು ಆರ್ಜಿ ಹೈಕೋರ್ಟಿನಲ್ಲಿತ್ತು ಎಂದು ಕೇಳಿದ್ದೆ. ಅದು ಏನಾಯಿತೆಂದು ಗೊತ್ತಿಲ್ಲ. ಆದರೆ ಮಾನ್ಯ ಸಚಿವರು ಹೇಳುತ್ತಾರೆ. ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ ಎಂದು. ಆದರೆ ಅವರು ಕ್ರಮ ಕೈಗೊಂಡಿಲ್ಲ. ಮೂರು ಇಲಾಖೆಗಳು ಏನಿವೆ, ವಿದ್ಯುಚ್ಛಕ್ತಿ, ಭೂಗರ್ಭ ಮತ್ತು ಲೋಕೋಪಯೋಗಿ ಇಲಾಖೆಗಳು ಇವು ಪ್ರತಿ ಪಂಪು ಸೆಟ್ಟಿಗೆ ೧೦ ಸಾವಿರ ರೂಪಾಯಿಗಳನ್ನು ವಸೂಲ್ಮಾಡಿ ಇಪ್ಪತ್ತಿಗೂ ಹೊಸ ಪಂಪುಸೆಟ್ಟುಗಳನ್ನು ಅಳವಡಿಸುತ್ತಿದ್ದಾರೆ. ಕಿತ್ತು ಹಾಕುತ್ತಿಲ್ಲ. ಆದರೆ ಮಾನ್ಯ ಸಚಿವರು ಕ್ರಮ ಕೈಗೊಂಡಿದ್ದೇವೆ, ತೆಗೆದುಹಾಕುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅವರು ತೆಗೆದುಹಾಕುತ್ತಿಲ್ಲ. ಇವತ್ತಿಗೂ ಸಹ

ಅಲ್ಲಿ ಹೊಸ ಪಂಪುಸೆಟ್ಟುಗಳನ್ನು ಆಳವಡಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಕೋರ್ಟಿನ ತೀರ್ಮಾನ ಏನಾಯಿತೆಂದು ನನಗೆ ಗೊತ್ತಿಲ್ಲ. ಕೆ.ಆರ್.ಎಸ್.ನ ಮೂಲ ಹಕ್ಕುದಾರರು ಯಾರಿದ್ದಾರೆ ಅವರಿಗೆ ಬಹಳ ತೊಂದರೆಯಾಗಿದೆ. ಅವರದ್ದು ಈ ಕಡೆ ಡ್ರೈ ಏರಿಯಾನು ಅಲ್ಲ, ಆ ಕಡೆ ವೆಟ್ ಏರಿಯಾನು ಅಲ್ಲ. ವರ್ಷಕ್ಕೆ ಸುಮಾರು ೫೦೦ ಎಕರೆಯಿಂದ ಒಂದು ಸಾವಿರ ಎಕರೆ ಜಮೀನುಬರಡಾಗುತ್ತಿದೆ. ಈ ಬಗ್ಗೆ ಮಾನ್ಯ ಸಚಿವರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಇದೊಂದು ಜ್ವಲಂತ ಸಮಸ್ಯೆ. ವಿಶ್ವೇಶ್ವರಯ್ಯನವರ ಉಪನಾಲೆಯಾದ ಕಾವೇರಿ ನಾಲೆಯಲ್ಲಿ ಸುಮಾರು ೧೯೮ ಪಂಪು ಸೆಟ್ಟುಗಳಿವೆ. ಅನಧಿಕೃತವಾಗಿ ಇರತಕ್ಕ ಪಂಪುಸೆಟ್ಟುಗಳು ನೀರನ್ನು ಎಳೆಯುತಕ್ಕ ಕಾರಣ ಆ ಭಾಗದ ಟೇಲ್– ಎಂಡ್‌ನಲ್ಲಿರುವ ಒಂದು ಸಾವಿರ ಎಕರೆಗೆ ನೀರನ್ನು ಒದಗಿಸತಕ್ಕದ್ದು ಕಷ್ಟ ಎಂಬುದು ಸರ್ವ ವಿದಿತವಾದ ವಿಚಾರ. ಜೊತೆಗೆ ಈ ನಾಲೆ ಹಳೆಯ ನಾಲೆ ಆಗಿದ್ದು ಲೀಕೇಜ್ ಕೂಡ ಆಗುತ್ತಿದೆ. ಆ ನಾಲೆಯ ಪಕ್ಕದಲ್ಲಿ ಬಾವಿಗಳ ಮೂಲಕ ಪೈಪನ್ನು ಹಾಕಿ ಅನಧಿಕೃತವಾಗಿ ನೀರನ್ನು ಎಳೆಯುತ್ತಿದ್ದಾರೆ. ಇದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ಪರಂಪರೆ. ಇದನ್ನು ನಿಲ್ಲಿಸುವುದಕ್ಕೆ ಈಗಾಗಲೇ ಎರಡು ಮೂರು ಸಾರಿ ವಿದ್ಯುಚ್ಛಕ್ತಿ ಇಲಾಖೆಯವರೊಂದಿಗೆ ನಮ್ಮ ಇಲಾಖೆಯವರು ಸಭೆಗಳನ್ನು ನಡೆಸತಕ್ಕದ್ದರ ಮೂಲಕ ಚರ್ಚೆ ಮಾಡಿದ್ದೇವೆ. ಒಂದು ತೀರ್ಮಾನಕ್ಕೆ ಕೂಡ ಬಂದು, ಈ ಬಗ್ಗೆ ಸರ್ಕಾರದ ಪತಿಯಿಂದ ಒಂದು ಹುಕುಂ ಅನ್ನು ಕೂಡ ಹೊರಡಿಸಿದ್ದೇವೆ ಆದರೆ ಈ ಹುಕ್ಕುಂ ರೈತರ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂಬುದು ಮಾನ್ಯ ಪುಟ್ಟು ಅವರಿಗೆ ಗೊತ್ತಿದೆ. ಎನ್.ಒ.ಸಿ. ಕೊಡುವುದನ್ನು ನಿಲ್ಲಿಸಿದರೆ ಎಲೆಕ್ಟ್ರಿಸಿಟಿ ಕೊಡುವುದನ್ನು ನಿಲ್ಲಿಸುತ್ತೇವೆಂದು ಅವರು ಹೇಳಿದರು. ಇವತ್ತು ನಾವು ಎನ್.ಒ.ಸಿ. ಕೊಡದೆ ಹಲವಾರು ಜನ ಅನಧಿಕೃತವಾಗಿ ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ನಾಲೆಯ ಕೆಳಗಡೆ ಅನ್‌ಆಥರೈಸ್ಡ್ ಅಚ್ಚುಕಟ್ಟು ಜಾಸ್ತಿ ಬಂದದ್ದರಿಂದ ಈ ಒಂದು ಸಮಸ್ಯೆ ಜ್ವಲಂತ ಸಮಸ್ಯೆಯಾಗಿದೆ. ಇದಕ್ಕೆ ರೈತರ ಮತ್ತು ಶಾಸಕರ ಸಹಕಾರ ಸಿಕ್ಕದೆ ಹೋದರೆ ಈ ದಿಸೆಯಲ್ಲಿ ಸರ್ಕಾರ ಎಷ್ಟೇ ಕಠಿಣ ಕ್ರಮಗಳನ್ನು ಕೈಗೊಂಡರೂ ಸಹ ಆದು ನೂರಕ್ಕೆ ನೂರರಷ್ಟು ಅನುಷ್ಠಾನಕ್ಕೆ ತರುವುದು ಕಷ್ಟವೆಂದು ತಮ್ಮ ಮೂಲಕ ಅವರಿಗೆ ತಿಳಿಯಪಡಿಸುತ್ತೇನೆ. ಅವರು ಸ್ಥಳೀಯರಾಗಿದ್ದಾರೆ. ಅಲ್ಲಿಯ ಮುಖಂಡರುಗಳು, ಶಾಸಕರು ಮತ್ತು ರೈತರು ಇದಕ್ಕೆ ಒಂದು ಪರ್ಯಾಯವಾದಂಥ ವ್ಯವಸ್ಥೆಯನ್ನು ಮಾಡಿದರೆ ಬಹಳ ಬೇಗ ಈ ಸಮಸ್ಯೆ ಇತ್ಯರ್ಥವಾಗುತ್ತದೆ. ಅಧಿಕೃತ ಅಚ್ಚುಕಟ್ಟುದಾರರಿಗೆ ನೀರು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಆದರೆ ಮಧ್ಯಂತರ ಅಡಚಣೆಯಿಂದ ಈ ತೊಂದರೆಯಾಗಿರುವುದು ನಿಜ. ಈ ದಿಸೆಯಲ್ಲಿ ತೀವ್ರವಾಗಿ ನಾವು ಪರ್ಯಾಲೋಚಿಸಿ ಶೀಘ್ರದಲ್ಲಿ ಕ್ರಮ ಕೈಗೊಳ್ಳುವ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಎಂ. ಪುಟ್ಟು.—ಸನ್ಮಾನ್ಯ ಅಧ್ಯಕ್ಷರೆ, ಇಲಾಖೆಗಳನ್ನು ಸರ್ಕಾರದ ಹತೋಟಿಯಲ್ಲಿ ಇಟ್ಟುಕೊಳ್ಳದಂಥ ಸಚಿವರು ಸ್ಥಳೀಯ ಶಾಸಕರು ಈ ಸಮಸ್ಯೆಯನ್ನು ಪರಿಹರಿಸಬೇಕು, ನಮ್ಮ ಕೈಯಲ್ಲಾಗುವುದಿಲ್ಲ ಎಂಬ ಭಾವನೆಯಲ್ಲಿ ಮಾತನಾಡುತ್ತಿದ್ದಾರೆ. ಸರ್ಕಾರ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದರೆ ಪರಿಸ್ಥಿತಿ ಈ ಮಟ್ಟಕ್ಕೆ ಹೋಗುತ್ತಿರಲಿಲ್ಲ. ಸುಮಾರು ೧೦–೧೫ ಸಾವಿರ ಎಕರೆ ನೀರಾವರಿ ಪ್ರದೇಶ ಇಂದು ಬರಡಾಗಿದೆ. ಕೆ.ಆರ್.ಎಸ್. ಅಣೆಕಟ್ಟಿಗೆ ಮಂತಿಕೆ ಮೂಲಕ ಎಷ್ಟು ಹಣ ಖರ್ಚಾಗಿದೆ, ಆ ಹಣವನ್ನು ಬಡ್ಡಿ ಸಮೇತ ರೈತರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೂ ಕೂಡ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂಬ ಭಾವನೆಯಿಂದ ಮಾತನಾಡುತ್ತಿದ್ದಾರೆ. ಹಾಗಾದರೆ ರೈತರು ಕೊಟ್ಟಿರುವ ಕಾಂಟ್ರಿಬ್ಯೂಷನ್ ಹಣವನ್ನು ಫಿಕ್ಸೆಡ್ ಡಿಪಾಸಿಟ್ ಇಟ್ಟಿದ್ದಿದ್ದರೆ ಎಷ್ಟು ಹಣ ಬರುತ್ತಿತ್ತೋ ಅಷ್ಟೇ ಹಣವನ್ನು ನಮಗೆ ಕೊಟ್ಟರೆ ನಾವು ಹೊರಗಡೆ ಹೋಗಿ ಸೇರಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಸಭಾಧ್ಯಕ್ಷರ ಮೂಲಕ ಮಾನ್ಯ ಸಚಿವರಿಗೆ ಕೋರುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ನಾವು ಸರ್ಕಾರಕ್ಕೆ ಆಗುವುದಿಲ್ಲ ಎಂದು ಹೇಳಿಲ್ಲ. ಸರ್ಕಾರ ಕಾನೂನನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದಕ್ಕೆ ಸಿದ್ಧವಿದೆ. ಆದರೆ ಇಂಥ ಜ್ವಲಂತ ಸಮಸ್ಯೆಗಳು ಬಂದಾಗ, ಜ್ವಲಂತ ಪ್ರಶ್ನೆಗಳು ಬಂದಾಗ ಸ್ಥಳೀಯ ಶಾಸಕರು, ರೈತರು ಮತ್ತು ಮುಖಂಡರುಗಳ ಸಹಕಾರ ಬೇಕು. ಮತ್ತು ಪರ್ಯಾಯವಾದ ಆಲೋಚನೆಯನ್ನು ಅವರೂ ಕೂಡ ಮಾಡಬೇಕು ಎಂಬ ದೃಷ್ಟಿಯಿಂದ ಹೇಳಿದ್ದೇನೆ. ಅವರು ಮುಖಂಡರಾಗಿ ಆ ಕೆಲಸವನ್ನು ಮಾಡಬೇಕಾಗುತ್ತದೆ. ಕೆಲಸ ನಿರ್ವಹಿಸುವಾಗ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಾರದು ಎಂದು ಮನವಿ ಮಾಡುತ್ತಾ, ಕಟ್ಟುನಿಟ್ಟಾಗಿ ಆಜ್ಞೆ ಮಾಡುವುದಕ್ಕೆ ಸರ್ಕಾರಕ್ಕೆ ಏನೂ ಕಷ್ಟವಾಗುವುದಿಲ್ಲ. ನಾಳೆ ಬೆಳಿಗ್ಗೆಯೇ ಪಂಪ್‌ಸೆಟ್‌ಗಳಿಗೆ ಡಿಸ್‌ಕನೆಕ್ಷನ್ ಮಾಡಬಹುದು. ಆದರೆ ಅದರ ಪರಿಣಾಮವನ್ನು ಜನತೆ ಸ್ಥಳೀಯವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ತೊಂದರೆ ತಪ್ಪದೇ ಇದ್ದರೆ ಟೈಲ್ ಎಂಡ್‌ನಲ್ಲಿರುವವರಿಗೆ ತೊಂದರೆ

ಯಾಗುತ್ತದೆಂದೂ ಖಾತ್ರಿಯಾಗಿದೆ. ಈ ದಿಸೆಯಲ್ಲಿ ನಾವು ೧೦೦ಕ್ಕೆ ೧೦೦ರಷ್ಟೂ ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಕೆ. ಎಂ. ಪುಟ್ಟು.—ಇವರು ಕ್ರಮ ತೆಗೆದುಕೊಳ್ಳುವುದಕ್ಕೆ ಶಾಸಕರು ಯಾರು ಅಡ್ಡ ಬರುವುದಿಲ್ಲ. ಈಗಾಗಲೇ ೧೯೪ ಪಂಪ್‌ಸೆಟ್ಟುಗಳು ಎಂದು ಏನು ಹೇಳಿದ್ದಾರೆ, ಅದು ಸರಿಯಲ್ಲ. ಅಲ್ಲಿ ಎಲ್ಲಾ ಭಾಗದಿಂದ ಸುಮಾರು ೧೨೦೦ ಪಂಪ್‌ಸೆಟ್‌ಗಳಿವೆ. ಅಧಿಕಾರಿಗಳು ಅಂಕಿಅಂಶಗಳನ್ನು ತಪ್ಪಾಗಿ ನಮೂದಿಸಿದ್ದಾರೆ. ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಒಂದು ಕಡೆ ಉತ್ತರ ಹೇಳುತ್ತಾರೆ, ಇನ್ನೊಂದು ಕಡೆ ಶಾಸಕರು ಸಹಕಾರ ಕೊಟ್ಟರೆ ಮಾತ್ರ ಈ ಕೆಲಸ ಆಗುತ್ತದೆಂದು ಹೇಳುತ್ತಾರೆ. ಈ ವಾದವನ್ನು ಹೇಗೆ ಕೇಳಬೇಕೋ ಅರ್ಥವಾಗುತ್ತಿಲ್ಲ. ಅನಧಿಕೃತವಾಗಿ ಬಳಸುತ್ತಿರುವ ಪಂಪ್‌ಸೆಟ್‌ಗಳವರ ಬಗ್ಗೆ ಅನುಕಂಪ ಇದ್ದರೆ ಮೂಲ ಆಚ್ಚುಕಟ್ಟುದಾರರಾದ ನಮಗೆ ಹೆಚ್ಚು ನೀರು ಕೊಟ್ಟು, ನಮ್ಮನ್ನು ರಕ್ಷಣೆ ಮಾಡಿ. ಅವರನ್ನು ರಕ್ಷಣೆ ಮಾಡಿ ಹೆಚ್ಚಿಗೆ ನೀರು ಕೊಡುವುದಕ್ಕೆ ಸಾಧ್ಯ ಇಲ್ಲದೇ ಹೋದರೆ, ಮೂಲಆಚ್ಚುಕಟ್ಟುದಾರರಾದ ನಮಗೆ ಸರ್ಕಾರ ಭರವಸೆ ಕೊಡಬೇಕು. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದರ ಮೂಲಕ ಮತ್ತು ಅನಧಿಕೃತವಾಗಿ ಇಟ್ಟುಕೊಂಡಿರುವ ಪಂಪ್‌ಸೆಟ್‌ನವರಿಗೆ ವಿದ್ಯುತ್ ಕತ್ತು ಹಾಕುವುದರ ಮೂಲಕ ಅಧಿಕೃತವಾಗಿ ಪಂಪ್‌ಸೆಟ್ ಇಟ್ಟುಕೊಂಡಿರುವ ಆಚ್ಚುಕಟ್ಟುದಾರರಿಗೆ ಅನುಕೂಲವಾಗುವಂತೆ ಕ್ರಮ ತೆಗೆದುಕೊಳ್ಳುತ್ತಾರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ನೀರನ್ನು ಯಾರಿಗೆ ಅವಶ್ಯಕವಾಗಿ ಒದಗಿಸಬೇಕೋ ಅವರಿಗೆ ಸರಿಯಾದ ರೀತಿಯಲ್ಲಿ ಒದಗಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಅದನ್ನು ಬಿಟ್ಟು ಬಗರ್‌ಹುಕುಂನಲ್ಲಿ ನೀರು ತೆಗೆದುಕೊಂಡು ತಪ್ಪು ಮಾಡುತ್ತಿರುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಮೂಲ ಆಚ್ಚುಕಟ್ಟುದಾರರಿಗೆ ಅನುಕೂಲ ಮಾಡಿಕೊಡಬೇಕು ಇದರ ಬಗ್ಗೆ ಸರ್ಕಾರ ಉತ್ತರ ಹೇಳಬೇಕು ಸ್ವಾಮಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸನ್ಮಾನ್ಯ ಅಧ್ಯಕ್ಷರೆ, ಈಗ ಏರಿಯಾ ಡೆವಲಪ್ ಆಗದೇ ಇದ್ದಾಗ ಕೆಲವೊಂದು ಕಡೆ ಅಧಿಕೃತವಾಗಿ ಅವರಿಗೆ ಪರವಾನಗಿ ಕೊಟ್ಟಿದ್ದಾರೆ. ಆ ಆಚ್ಚುಕಟ್ಟು ಪೂರ್ತಿ ಪ್ರಮಾಣದಲ್ಲಿ ಡೆವಲಪ್ ಆದಾಗ ಈ ತೊಂದರೆ ಬಂದಿರುವುದು ಸಹಜ. ಇನ್ನೂ ಕೆಲವು ಕೇಸ್‌ಗಳಲ್ಲಿ ಯಾವುದೇ ಕಾನೂನು ಇಲ್ಲದೆ ಹಿರಿಯ ಶಾಸಕರು ಹೇಳಿದಂತೆ ನೇರವಾಗಿ ಮಾಡತಕ್ಕ ಪ್ರಸಂಗ ಬಂದಿದೆ.

೧೧–೩೦ ಎ.ಎಂ.

ಈಗ ಕೆ.ಇ.ಬಿ.ಯವರು ಅವರ ಸರ್ವೀಸನ್ನು ಕಟ್ಟಾಫ್ ಮಾಡಿದರೆ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆ. ಈಗಾಗಲೇ ಕೆಲವರು ಸ್ಟೇ ತಂದಿದ್ದಾರೆ ಇದು ಒಂದು ರೀತಿಯಲ್ಲಿ ಕಷ್ಟಕರವಾದ ಸಮಸ್ಯೆಯಾಗಿದೆ ಆದರೂ ಮಾನ್ಯ ಸದಸ್ಯರು ಹೇಳಿದ ಹಾಗೆ ನ್ಯಾಯಬದ್ಧವಾದ ಆಚ್ಚುಕಟ್ಟುದಾರರಿಗೆ ನೀರನ್ನು ಕೊಡಬೇಕಾದುದು ನೀರಾವರಿ ಇಲಾಖೆಯ ಜವಾಬ್ದಾರಿ ಆಗಿದೆ. ಈ ಹಿನ್ನಲೆಯಲ್ಲಿ ನಾವು ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೈಕೋರ್ಟಿನವರು ತೀರ್ಮಾನವನ್ನು ತೆಗೆದುಕೊಳ್ಳುವುದರಲ್ಲಿ ಕೂಡ ನ್ಯಾಯ ಯಾರ ಪರವಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿದು ತೀರ್ಮಾನವನ್ನು ಕೊಡುತ್ತಾರೆಂಬ ವಿಶ್ವಾಸ ನನಗಿದೆ. ಹೈಕೋರ್ಟಿನಲ್ಲಿ ಕೇಸು ಪೆಂಡಿಂಗ್‌ನಲ್ಲಿದ್ದರೂ ಸಹ ಅವರೇನು ಸ್ಟೇ ಕೊಟ್ಟಿಲ್ಲ ಇವರಿಗೆ ಕೊಡಬೇಡಿ ಅಥವಾ ಕೊಡಿ ಅಂತ ಕೂಡ ತೀರ್ಮಾನ ಹೇಳಿಲ್ಲ ಈ ವಂಧ್ಯ ವಿದ್ಯುಚ್ಛಕ್ತಿ ಮಂಡಲಿ ಕೂಡ ಸರ್ಕಾರದ ಅಧೀನದಲ್ಲಿರುವುದರಿಂದ ವಿದ್ಯುಚ್ಛಕ್ತಿ ಸರಬರಾಜು ಕೊಡುವುದನ್ನು ನಿಲ್ಲಿಸಿ ಬಿಟ್ಟರೆ, ಕೂಡಲೇ ಈ ಕಾರ್ಯಕ್ರಮ ಕೈಗೊಂಡ ಹಾಗೆ ಆಗುತ್ತದೆ. ಆ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ಈ ಶಾಸನ ಸಭೆಯ ಅಧಿವೇಶನ ಮುಗಿಯುವುದರೊಳಗೆ ಸರ್ಕಾರ ತೆಗೆದುಕೊಂಡು ಯಾರಿಗೆ ನಿಜವಾಗಿಯೂ ನೀರನ್ನು ಉಪಯೋಗಿಸಲು ಹಕ್ಕುದಾರಿಕೆ ಇದೆಯೋ ಅವರಿಗೆ ಸಹಾಯ ಮಾಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ನಂ. ೨೬೪ (೬೩೮)

ಅಧ್ಯಕ್ಷರು.—ಶ್ರೀ ಎಚ್.ಎಂ. ರೇವಣ್ಣ.—(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು).